

ಚೀನಾದ ವುಹಾನ್‌ನ ಪ್ರಯೋಗಾಲಯದಲ್ಲಿ ಪ್ರಸಿದ್ಧ ವೈರಾಣು ತಜ್ಞೆ ಷಿ ಜೆಂಗ್ಲಿ ಕಾರ್ಯ ನಿರ್ವಹಿಸುತ್ತಿರುವುದು

ಸೇರಿದ ಜೀವಿಯೊಂದನ್ನು ವುಹಾನ್ ಲ್ಯಾಬಿನ ಸಂಶೋಧಕರು ಪರೀಕ್ಷೆಗೆಂದು ತಮ್ಮ ಲ್ಯಾಬಿಗೆ ತೆಗೆದುಕೊಂಡು ಹೋದರು. ಆಗ ಆ ಜೀವಿಗೆ ನೀಡಲಾಗಿದ್ದ ಹೆಸರು 'ಆರ್.ಎ.ಟಿ.ಜಿ13'. 'ಜೀನ್ ಎಡಿಟಿಂಗ್' ತಂತ್ರಜ್ಞಾನವನ್ನು ಬಳಸಿ, ಆ ಜೀವಿಯ ಕೆಲವು ಮೂಲಭೂತ ಜೀನುಗಳನ್ನು ತೆಗೆದುಹಾಕಿ, ಬೇರೆ ಬೇರೆ ತೆರನಾದ ಜೀನುಗಳನ್ನು ಹೊಂದಿಸಿ ಹೊಸದು, ಹೊಸದೊಂದು ಜೀವಿಯನ್ನು ಪ್ರಯೋಗಾಲಯದಲ್ಲಿ ಸೃಷ್ಟಿ ಮಾಡಲಾಯಿತು. ಹೀಗೆ ರೂಪುಗೊಂಡ ಕುಲಾಂತರಿ ವೈರಾಣುವಿಗೆ ನೀಡಿದ ಹೆಸರು 'ಕೊರೊನಾ'. ಅದು ಮನುಷ್ಯರಲ್ಲಿ ಉಂಟುಮಾಡುವ ರೋಗಕ್ಕೆ 'ಕೋವಿಡ್19' ಎಂದು ಹೆಸರಿಸಲಾಯಿತು.

ಹೀಗೆ ಸೃಷ್ಟಿಯಾದ ವೈರಾಣು ಅದು ಹೇಗೋ ಪ್ರಯೋಗಾಲಯದಿಂದ ಸೋರಿಕೆಯಾಯಿತು. ಆ ವೈರಾಣುವಿನಿಂದ ಜಗತ್ತಿನೆಲ್ಲೆಡೆ ಹಾಹಾಕಾರ ಶುರುವಾದ ಕೂಡಲೇ, 'ಕೋವಿಡ್–19' ರೋಗ ಹರಡಲು ಪ್ರಮುಖ ಕಾರಣ ಬಾವಲಿ ಎನ್ನುವ ಸುದ್ದಿಯನ್ನು ಹಬ್ಬಿಸಲಾಯಿತು. ಇದು ಕೊರೊನಾ ವೈರಸ್ ವುಹಾನ್‌ನ ಪ್ರಯೋಗಾಲಯದಲ್ಲಿ ಅಪಾಯಕಾರಿಯಾಗಿ ರೂಪಾಂತರಗೊಂಡ ಕಥೆ. ಅಂದಹಾಗೆ, ಪ್ರಯೋಗಾಲಯದಲ್ಲಿ ಅಪಾಯಕಾರಿ ಜೀವಿಗಳನ್ನು ಸೃಷ್ಟಿಸಿದ ಉದ್ದೇಶ ಏನು? ಆ ಅಪಾಯಕಾರಿ ಜೀವಿಗಳು ಪ್ರಯೋಗಾಲಯದಿಂದ ಸೋರಿಕೆಯಾಗಿದ್ದು ಹೇಗೆ? ಸದ್ಯಕ್ಕೆ ಬಗೆಹರಿಯದಿರುವ ಪ್ರಶ್ನೆಗಳಿವು.

## ವುಹಾನ್ ವೈರಾಣು ಅಧ್ಯಯನ ಸಂಸ್ಥೆ

ಅಪಾಯಕಾರಿ ರೋಗಾಣುಗಳನ್ನು ನಿರ್ವಹಿಸುವ ಪ್ರಯೋಗಾಲಯಗಳಲ್ಲಿ ಅತಿ ಹೆಚ್ಚಿನ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಈಗ ಸುದ್ದಿಯಲ್ಲಿರುವ ವುಹಾನ್‌ನ ವೈರಾಣುಶಾಸ್ತ್ರ ಪ್ರಯೋಗಾಲಯವು ಚೀನಾದ ಅತ್ಯುನ್ನತ ವಿಜ್ಞಾನ ಅಕಾಡೆಮಿಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರತಿಷ್ಠಿತ ಸಂಸ್ಥೆ. 'ವಿಶ್ವ ಆರೋಗ್ಯ ಸಂಸ್ಥೆ' ಗುರುತಿಸಿರುವ ಬೆರಳೆಣಿಕೆಯ 'ಬಿ.ಎಸ್.ಎಲ್4' (BSL Biosafety level) ಲ್ಯಾಬ್‌ಗಳಲ್ಲಿ ಇದೂ ಒಂದು. ಅತ್ಯಾಧುನಿಕ ಸಂರಕ್ಷಣಾ ಸೌಲಭ್ಯವನ್ನು ಹೊಂದಿರುವ ಪ್ರಯೋಗಾಲಯದಲ್ಲೇ ವೈರಾಣು ಸೋರಿಕೆ ಆಗಿರುವುದರಿಂದ, ಜಗತ್ತಿನೆಲ್ಲೆಡೆ ಇರುವ ಪ್ರಯೋಗಾಲಯಗಳು ಹಾಗೂ ಅವುಗಳ ಸುರಕ್ಷತೆಯ ಕುರಿತು ಹಲವಾರು ಪ್ರಶ್ನೆಗಳು ಇದೀಗ ಎಲ್ಲರಲ್ಲೂ ಕಾಡಲು ಪ್ರಾರಂಭಿಸಿವೆ.

ಸೂಕ್ಷ್ಮಾಣುಜೀವಿಗಳು ಮೂರ್ತಿಯಲ್ಲಿ ಚಿಕ್ಕದಾದರೂ ಅವುಗಳಿಂದಾಗುವ ಅವಾಂತರಗಳು ಅಷ್ಟಿಷ್ಟಲ್ಲ. ಜೈವಿಕ ಯುದ್ಧಗಳಲ್ಲಿ ಆಯುಧಗಳಂತೆ ಇವುಗಳನ್ನು ಬಳಸಿಕೊಳ್ಳಲಾಗುತ್ತಿರುವುದು ದುರಂತ. ಹೀಗಿರುವಾಗ ಜೈವಿಕ ಅಸ್ತ್ರಗಳು, ಜೈವಿಕ ಭಯೋತ್ಪಾದನೆ, ಜೀವಾಣುಗಳ ಅವುಗಳಿಂದಾಗುವ ಅಪಾಯಗಳ ಕುರಿತಾದ ಸಾಕ್ಷರತೆ ನಮ್ಮೆಲ್ಲರಿಗೂ ಇರಬೇಕಿರುವುದು ಅತಿ ಅವಶ್ಯಕ.

ವೈದ್ಯಕೀಯ ಜೀವಶಾಸ್ತ್ರಕ್ಕೆ ಸಂಬಂಧಿಸಿದ ಪ್ರಯೋಗಾಲಯಗಳಲ್ಲಿ ಬ್ಯಾಕ್ಟೀರಿಯಾ, ಶಿಲೀಂಧ್ರ, ವೈರಾಣುಗಳಂತಹ ಹಾನಿಕಾರಕ ಜೀವಿಗಳೊಂದಿಗೆ ವಿಜ್ಞಾನಿಗಳು ಕೆಲಸ ಮಾಡಬೇಕಾಗಿ ಬರುತ್ತದೆ. ಅಂತಹ ಸಮಯದಲ್ಲಿ ಅಲ್ಲಿನ ಸಂಶೋಧಕರಿಗೆ, ಸ್ವ ಸಂರಕ್ಷಣಾ ಉಡುಪು, ಸಲಕರಣೆಗಳನ್ನು ಒದಗಿಸಲಾಗಿರುತ್ತದೆ. ಪ್ರಯೋಗಾಲಯಗಳಲ್ಲಿ ಪ್ರತಿಯೊಂದನ್ನೂ ಪೂರ್ವ ನಿರ್ಧರಿತ ಪ್ರೋಟೋಕಾಲ್‌ಗಳನ್ನು ಅನುಸರಿಸಿ ನಿರ್ವಹಿಸಬೇಕಾಗುತ್ತದೆ. ಹಾಗೊಂದು ವೇಳೆ ಪೂರ್ವ ನಿಯೋಜನೆಯಂತೆ ಪ್ರಯೋಗವನ್ನು ಮಾಡದೇಹೋದಲ್ಲಿ ಸಮರ್ಪಕ ಫಲಿತಾಂಶವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಅನೇಕ ಸಲ ಪ್ರಯೋಗಾಲಯದ ಮಾರ್ಗಸೂಚಿಗಳನ್ನು ಪಾಲಿಸದೇ ಇದ್ದಂತಹ ಸಮಯದಲ್ಲಿ ಅನೇಕ ಅವಘಡಗಳು ನಡೆದುಹೋದ ಅನೇಕ